ತಲುಪಲು ಇದ್ದ ಅತಿ ಸಮೀಪದ ಕಣಿವೆ 'ಹೋತಿ' ಕಣಿವೆ. ಇದು ಸಮುದ್ರ ಮಟ್ಟದಿಂದ ೧೯,೦೦೦ ಅಡಿ ಎತ್ತರದಲ್ಲಿದ್ದು ಅತ್ಯಂತ ಕಡಿದಾಗಿದೆ. ಈ ದಾರಿಯಲ್ಲಿ ಕೆಲವು ಕಿಲೋಮೀಟರ್‌ಗಳಷ್ಟು ಪರ್ವತ ದಾರಿ ಸಾಗಲೂ ಅತ್ಯಂತ ಎದೆಗಾರಿಕೆ ಬೇಕು. ವ್ಯಾಪಾರಿಗಳಿಗೆ ಬೇರೆ ಕೆಲಸಗಳಿದ್ದುದರಿಂದ ಈ ಜಾಗದಲ್ಲಿ ನನ್ನನ್ನು ಬಿಟ್ಟು ಅವರು ಹೊರಟುಹೋದರು. ಆ ಕೊರೆಯುವ ಚಳಿಯಲ್ಲಿ ನಾನು ಚಿರಂತನ ನಿದ್ರೆಗೆ ಜಾರುವ ಎಲ್ಲಾ ಸಾಧ್ಯತೆಗಳೂ ಇರುವುದರಿಂದ ನಿರಂತರ ಸಾಗುತ್ತಲೇ ಇರಬೇಕೆಂದೂ, ಎಷ್ಟೇ ಆಯಾಸವಾದರೂ ಎಲ್ಲೂ ನಿಲ್ಲಬಾರದೆಂದೂ, ಅವರು ನನಗೆ ಸಲಹೆ ಕೊಟ್ಟಿದ್ದರು.

ಪರ್ವತದ ತುದಿಯಲ್ಲಿ ದೊಡ್ಡ ದೊಡ್ಡ ರಣಹದ್ದುಗಳು ಕುಳಿತಿದ್ದವು. ಅವು ನನ್ನತ್ತಲೇ ನೋಡುತ್ತಿದ್ದವು. ಸುರಿಯುವ ಹಿಮಪಾತದ ಕಾರಣ ಕೆಲವೊಮ್ಮೆ ವ್ಯಾಪಾರಿಗಳಿಗೆ, ತಮ್ಮ ಪ್ರಾಣಿಗಳೊಡನೆ ಪ್ರಯಾಣ ಮುಂದುವರೆಸಲಾಗುತ್ತಿರಲಿಲ್ಲ, ಕೆಲವೊಮ್ಮೆ ಅವರು ಮರಗಟ್ಟಿ ಹಾಗೇ ಕೊನೆಯುಸಿರೆಳೆಯುವ ಸಂದರ್ಭಗಳೂ ಇರುತ್ತಿದ್ದವು. ಈ ರಣಹದ್ದುಗಳಿಗೆ ಆ ಶವಗಳೇ ಆಹಾರ. ಮಾನವರ ಕೂದಲುಗಳು, ಅಲ್ಲಲ್ಲಿ ಚೆದುರಿ ಬಿದ್ದಿರುವ ಅಸ್ಥಿಪಂಜರಗಳು, ಸಣ್ಣ ಸಣ್ಣ ಪ್ರಾಣಿಗಳು, ಈ ಎಲ್ಲವನ್ನೂ ನಾನು ಕಂಡೆ. ಗುರುಮಹಾರಾಜರ ಕೃಪೆಯಿಂದ, ಆಕಾಶ ಪ್ರಕಾಶಮಾನವಾಗಿತ್ತು. ನಾನು ಈ ಅಪಾಯಕಾರಿ ಪರಿಸ್ಥಿತಿಯನ್ನು ಕ್ಷೇಮವಾಗಿ ದಾಟಲು ಸಾಧ್ಯವಾಯಿತು. ಅಲ್ಲಿಂದ ಭಾರತದ ಕಡೆಗೆ ಇಳಿಯತೊಡಗಿದೆ.

ಇಲ್ಲಿ ನನಗೊಂದು ಪರೀಕ್ಷೆ ಎದುರಾಯಿತು. ಸ್ವಲ್ಪ ದೂರದಲ್ಲಿ ಟಿಬೆಟ್ ದೇಶದ ಗನ್ ಹಿಡಿದ ವ್ಯಕ್ತಿಯೊಬ್ಬನು ಭಾರತೀಯ ಯಾತ್ರಿಕರನ್ನು ದರೋಡೆ ಮಾಡುವ ಸಲುವಾಗಿ ಕಾಯುತ್ತಿದ್ದನು. ಮೊದಲನೆಯದಾಗಿ, ನನ್ನ ಬಳಿ ಬೆಲೆಬಾಳುವ ಪದಾರ್ಥಗಳೇನೂ ಇರಲಿಲ್ಲ, ಎರಡನೆಯದು ನಾನು ಸಂನ್ಯಾಸಿಯಾಗಿದ್ದೆ. ಆತ ನನ್ನನ್ನು ಸಾಗಿಹೋಗಲು ಬಿಟ್ಟ. ನಿಧಾನವಾಗಿ ಧೈರ್ಯದಿಂದ ಮುನ್ನಡೆಯುತ್ತಿದ್ದಾಗ ಅಲ್ಲಿ ಅವನ ಬಿಡಾರವನ್ನೂ, ಚಹಾವನ್ನು ಕೊಡುತ್ತಿದ್ದ ಸ್ತ್ರೀಯೊಬ್ಬಳನ್ನೂ ನೋಡಿದೆ. ಬಿಸಿ ಚಹಾವನ್ನು ಕುಡಿದು ನನ್ನ ಪ್ರಯಾಣ ಮುಂದುವರೆಸಿದೆ. ೧೦-೧೫ ಕಿಲೋಮೀಟರ್ ದೂರ ಮಿತಿಯಲ್ಲಿರುತ್ತಿದ್ದ ಛತ್ತಿಗಳಲ್ಲಿ ವಿಶ್ರಾಂತಿ ಪಡೆಯುತ್ತಿದ್ದೆ. ಆ ಛತ್ತಿಗಳಲ್ಲಿ ಹೇನುಗಳ ಕಾಟ ವಿಪರೀತ ಇತ್ತು. ಅವು ನನ್ನ ಬಟ್ಟೆಗಳಿಗೂ ಹತ್ತಿಕೊಂಡವು.

ಹೀಗೇ ಒಂದು ವಾರ ಕಾಲ ನಡೆಯುತ್ತಾ ನಡೆಯುತ್ತಾ ನಾನು ಬದರೀನಾಥಕ್ಕೆ ಬಂದು ತಲುಪಿದೆ. ಇಲ್ಲಿ ತಪ್ತಕುಂಡದಲ್ಲಿ ಹಾಯಾಗಿ ಸ್ನಾನ ಮಾಡಿದೆ. ಚಳಿಯ ಕಾರಣ ಎಷ್ಟೋ ವಾರಗಳ ಕಾಲ ನಾನು ಸ್ನಾನವನ್ನೇ ಮಾಡಿರಲಿಲ್ಲ. ಬಿಸಿ ಸ್ನಾನದಿಂದ ನನ್ನ ಮೈ ಬಟ್ಟೆಗಳಿಗೆ ಹತ್ತಿಕೊಂಡಿದ್ದ ಹೇನುಗಳೆಲ್ಲಾ ಉದುರಿಹೋದವು. ನನ್ನ ಬಟ್ಟೆಗಳನ್ನೂ ಹೊದಿಕೆಗಳನ್ನೂ ತೊಳೆದು ಶುಚಿಮಾಡಿಕೊಂಡೆ. ೧೯೫೨ರ ಅಕ್ಟೋಬರ್ ತಿಂಗಳವರೆಗೆ ಇಲ್ಲೇ ಇದ್ದು ಒಂದು ಕುಟೀರದಲ್ಲಿ ವಾಸಿಸುತ್ತಾ ತಪಸ್ಸು ಮಾಡಿದೆ. ಚಳಿಗಾಲ ಸಮೀಪಿಸತೊಡಗಿತು ಸರಿಯಾದ ಭದ್ರವಾದ ನೆಲೆ, ಆಹಾರ ವ್ಯವಸ್ಥೆ ಇಲ್ಲದಿದ್ದ ಕಾರಣ ನಾನು ಪರ್ವತ ಇಳಿದು ಸಾಗಿ ಹೋಗುವ ನಿರ್ಣಯ ಕೈಗೊಂಡೆ. ಋಷೀಕೇಶಕ್ಕೆ ಬಂದು, ಅಲ್ಲಿಂದ ಹರಿದ್ವಾರವನ್ನು ತಲುಪಿ ನನ್ನ ಯಾತ್ರೆಯನ್ನು ಪೂರ್ಣಗೊಳಿಸಿದೆ.

ಈ ಎಲ್ಲಾ ಅನುಭವಗಳೂ ೬೦ ವರ್ಷಗಳ ಹಿಂದೆ ಆದುವು. ಆದರೂ ಇಂದಿಗೂ ಅವು ನನ್ನ ಮನದಲ್ಲಿ ಹಚ್ಚಹಸಿರಾಗಿದ್ದು ಸ್ಪಷ್ಟವಾಗಿದ್ದು ಸ್ಫೂರ್ತಿದಾಯಕವಾಗಿವೆ. ಈಗ ನಿಮ್ಮೊಡನೆ ಹಂಚಿಕೊಂಡಿರುವ ಈ ನನ್ನ ಯಾತ್ರೆ ನನ್ನ ಅಂತರಂಗ ಬಹಿರಂಗಗಳಲ್ಲಿ ಶ್ರೇಯಃಕಾರಕ ಪ್ರಚಂಡ ಬದಲಾವಣೆಯನ್ನು ತಂದಿದೆ.

*(ಮುಗಿಯಿತು)*

## ಮಾತೆಯ ಮಡಿಲು



ಸುಮಾರು ಒಂಬತ್ತು-ಹತ್ತು ವರ್ಷದ ಹುಡುಗ ಗೋವಿಂದ ಎನ್ನುವವನು ಜಯರಾಮಬಾಟಿಯಲ್ಲಿ ಶ್ರೀಮಾತೆಯವರ ಮನೆಯ ದನಕರುಗಳನ್ನು ನೋಡಿಕೊಳ್ಳುತ್ತಿದ್ದ. ಒಂದು ಸಲ ಅವನಿಗೆ ಮೈಕೈಯಲ್ಲಿ ವಿಪರೀತ ತುರಿಕೆ, ಉರಿ ಕಾಣಿಸಿಕೊಂಡಿತು. ರಾತ್ರಿ ಹೊತ್ತು ನೋವು ತಡೆಯಲಾರದೆ ಅವನು ಜೋರಾಗಿ ಅಳತೊಡಗಿದ. ಅವನ ಅಳುವನ್ನು ಕೇಳಿಸಿಕೊಂಡ ಶ್ರೀಮಾತೆಗೆ ರಾತ್ರಿಯೆಲ್ಲ ನಿದ್ದೆ ಬರಲಿಲ್ಲ. ಮರುದಿನ ಬೆಳಿಗ್ಗೆ ಅವರು ಗೋವಿಂದನನ್ನು ತಮ್ಮ ಕೋಣೆಗೆ ಕರೆದೊಯ್ದು, ತಾವೇ ಬೇವಿನಸೊಪ್ಪು, ಅರಶಿನದ ಲೇಪ ತಯಾರಿಸಿ, ಅದನ್ನು ಹೇಗೆ ಹಚ್ಚಿಕೊಳ್ಳಬೇಕು ಎಂದು ತೋರಿಸಿ ಕೊಟ್ಟರು. ಅವರು ಹೇಳಿ ಕೊಟ್ಟಂತೆ ಗೋವಿಂದ ಆ ಲೇಪವನ್ನು ಹಚ್ಚಿಕೊಳ್ಳುತ್ತಿದ್ದ. ಶ್ರೀಮಾತೆಯವರ ಪ್ರೀತಿ, ವಾತ್ಸಲ್ಯಗಳಿಂದ ಅವನ ಮನಸ್ಸು ಒಂದು ರೀತಿಯ ಅವರ್ಣನೀಯ ಆನಂದದಿಂದ ಪ್ರಫುಲ್ಲವಾಯಿತು. ಅವರಿಬ್ಬರ ಮುಖವನ್ನು ನೋಡಿ, ಅವರ ಮಾತುಕತೆಗಳನ್ನು ಕೇಳಿ ಗೋವಿಂದ ಶ್ರೀಮಾತೆಯವರ ಮಗನಲ್ಲವೆಂದು ಯಾರು ತಾನೇ ಹೇಳಿಯಾರು? ಶ್ರೀಮಾತೆಯವರ ಮನೆಗೆ ಕೆಲಸದ ಆಳುಗಳು ಬರಲಿ, ಗಾಡಿ ಹೊಡೆಯುವವರು ಬರಲಿ, ಪಲ್ಲಕ್ಕಿ ಹೊರುವವರು ಬರಲಿ, ಅಂಬಿಗರು ಅಥವಾ ಮೀನುಗಾರ-ಮೀನುಗಾರ್ತಿಯರು ಬರಲಿ ಅವರೆಲ್ಲರೂ ಶ್ರೀಮಾತೆಯವರ ಮಕ್ಕಳೇ ಆಗಿರುತ್ತಿದ್ದರು. ಅವರೆಲ್ಲರೂ ಭಕ್ತರಂತೆಯೇ ಶ್ರೀಮಾತೆಯವರ ಸ್ನೇಹ, ಪ್ರೀತಿಗಳಿಗೆ ಪಾತ್ರರಾಗುತ್ತಿದ್ದರು.

*(ಶ್ರೀಮಾತೆಯವರ ನೇರ ಶಿಷ್ಯ ಸ್ವಾಮಿ ಶಾರದೇಶಾನಂದರ ಸ್ಮೃತಿಚಿತ್ರದಿಂದ)*

# ವಿಶ್ವವ್ಯಾಪೀ ವಿವೇಕಾನಂದರು

ಸಿ. ಎಸ್.ಶಾಸ್ತ್ರೀ

ಸ್ವಾಮಿ ವಿವೇಕಾನಂದರ ಜೀವನ ಹಾಗೂ ವಿಚಾರಧಾರೆ ಇವು ಎಲ್ಲ ಮಿತಿಗಳನ್ನು ಮೀರಿ ನಿಂತು, ವಿಶ್ವವ್ಯಾಪಿಯಾದ ಧ್ಯೇಯ, ಧೋರಣೆಗಳನ್ನು ಎಲ್ಲೆಡೆ ಪಸರಿಸುತ್ತಿರುವುದನ್ನು ಇಂದು ನಾವು ಕಾಣುತ್ತಿದ್ದೇವೆ. ಈ ವಿಷಯವನ್ನು ಕುರಿತು ಬರೆದಿರುವ ಲೇಖಕರು ನಿವೃತ್ತ ಇತಿಹಾಸ ಪ್ರಾಧ್ಯಾಪಕರು. ಅವರು ದಿವ್ಯತ್ರಯರನ್ನು ಕುರಿತು ಅನೇಕ ಲೇಖನಗಳನ್ನು ಬರೆದು ವಿವಿಧ ಪತ್ರಿಕೆಗಳಲ್ಲಿ ಪ್ರಕಟಿಸಿದ್ದಾರೆ.

ಮಹಾಪುರುಷರು ಯಾವುದೇ ದೇಶ-ಕಾಲ-ಜನಾಂಗಕ್ಕೆ ಸೀಮಿತವಾಗಿಲ್ಲ ಎಂಬುದು ಸ್ವಾಮಿ ವಿವೇಕಾನಂದರ (೧೮೬೩-೧೯೦೨) ವ್ಯಕ್ತಿತ್ವದಿಂದ ತಿಳಿದು ಬರುತ್ತದೆ. ಮಹಾವೀರ, ಬುದ್ಧ, ಏಸು ಮೊದಲಾದವರು ದೇಶ-ಕಾಲಗಳ ಪರಿಧಿಯನ್ನು ಮೀರಿ ಜಗತ್ತಿಗೇ ಬೋಧಕರಾಗಿದ್ದಂತೆ, ಸ್ವಾಮಿ ವಿವೇಕಾನಂದರು ಆಧುನಿಕ ಯುಗದಲ್ಲಿ ಜಗತ್ತಿಗೇ ಮಾರ್ಗದರ್ಶಕರಾದರು.



## ಆತ್ಮೋದ್ಧಾರದ ವಿಶಾಲ ಕಲ್ಪನೆ

ಸನಾತನ ಧರ್ಮದ ಅಂತಿಮ ಗುರಿಯೇ ಮೋಕ್ಷಸಾಧನೆ. ಅದು ಜನನ ಮರಣಗಳ ಸಂಸಾರ ಬಂಧನದಿಂದ ಬಿಡುಗಡೆ ಮಾಡಿ ಮುಮುಕ್ಷುತ್ವ ನೀಡುವುದಾಗಿದೆ. ಅದಕ್ಕಾಗಿ ಸಾಧಕರು ವಿವಿಧ ಮಾರ್ಗಗಳನ್ನು ಅನುಸರಿಸುತ್ತಾರೆ. ಆದರೆ, ಅವೆಲ್ಲಾ ಕೇವಲ ವೈಯಕ್ತಿಕ ಆತ್ಮೋದ್ಧಾರಕ್ಕಾಗಿ ಮಾಡುವ ಸಾಧನೆಗಳು. ಈ ರೀತಿಯ ವ್ಯಕ್ತಿಕೇಂದ್ರೀಕೃತ ಆತ್ಮೋದ್ಧಾರಕ್ಕಿಂತ ತೀರಾ ಭಿನ್ನವಾದುದು ವಿವೇಕಾನಂದರ ಕಲ್ಪನೆ. ಆತ್ಮೋದ್ಧಾರದ ವಿಶಾಲ ಕಲ್ಪನೆ ಅವರದಾಗಿತ್ತು. ಅದು ಓರ್ವವ್ಯಕ್ತಿಗೆ ಮಾತ್ರ ಸಂಬಂಧಿಸಿದ್ದಲ್ಲ. ಇಡೀ ಮನುಕುಲದ ಮೋಕ್ಷಕ್ಕಾಗಿ ಅವರ ಸಾಧನೆಯಾಗಿತ್ತು! ''ವಿಶ್ವದ ಜನರ ದುಃಖವನ್ನು ಬಗೆಹರಿಸುವ ಸಲುವಾಗಿ ನಾನು ಸಾವಿರಾರು ಜನ್ಮಗಳನ್ನು ತಳೆಯಲೂ ಸಿದ್ಧನಿದ್ದೇನೆ ಮತ್ತು ಎಲ್ಲರನ್ನೂ ನನ್ನೊಂದಿಗೆ ಮೋಕ್ಷದತ್ತ ಕೊಂಡೊಯ್ಯುವೆನು'' - ಎಂಬುದು ಅವರ ನಿಲುವಾಗಿತ್ತು. *(Complete Works of Swami Vivekananda, Vol.6)* ಅವರು ಕಂಡುಕೊಂಡ ಸತ್ಯ, ಸರ್ವಜನ ಹಿತವಾದ ಸಾರ್ವತ್ರಿಕ ಆತ್ಮೋದ್ಧಾರ. ವ್ಯಕ್ತಿಗತವಾದ ಸ್ವರ್ಗಕ್ಕಿಂತ ಜನಹಿತವಾದ ನರಕವೇ ಮೇಲು ಎಂಬ ಭಾವನೆ ಅವರದಾಗಿತ್ತು. ಈ ವಿಶಾಲ ಕಲ್ಪನೆ ಅವರ ವಿಶ್ವವ್ಯಾಪಕತ್ವಕ್ಕೆ ಕೈಗನ್ನಡಿ. ಸ್ವಾರ್ಥದ ಲವಲೇಶವೂ ಇಲ್ಲದ ಅವರ ಈ ಸಾಧನೆಯ ಗುರಿ ವಿಶ್ವದಾದ್ಯಂತ ಇರುವ ಜನರ ಸೇವೆಯಾಗಿತ್ತು.

## ಹೃದಯ ಶ್ರೀಮಂತಿಕೆ

ವಿವೇಕಾನಂದರು ವಿಶ್ವಮಾನವತಾವಾದದ ಬಲವಾದ ಪ್ರತಿಪಾದಕರಾಗಿದ್ದರು. ಮಾನವನ ಕೃತಕ ವಿಂಗಡನೆಗಳಾದ, ಜಾತಿ-ಮತ-ದೇಶಗಳ ಅಡೆ-ತಡೆಗಳನ್ನು ಮೀರಿ, ಮನುಕುಲದ ಏಕತೆಯನ್ನು ಸಾರುವ ಈಶ್ವರೀಯ ಜಗತ್ತನ್ನು ಅವರು ಕಂಡಿದ್ದರು. ತನ್ನಲ್ಲಿ ಇತರರನ್ನು ಗುರುತಿಸುವ, ಮತ್ತು ಇತರರಲ್ಲಿ ತನ್ನನ್ನು ಕಾಣುವ ಮೂಲಭಾವನೆಯು ಜನರೊಳಗಿನ ಬಾಹ್ಯ ಭೇದಗಳನ್ನು ಮರೆಸಿ, ಶುದ್ಧಾತ್ಮವನ್ನು ನೋಡಲು ಸಹಕಾರಿ ಎಂದು ಅವರು ತಿಳಿದಿದ್ದರು. ವಿವೇಕಾನಂದರು ಭಾರತೀಯರಲ್ಲಿಯ ಜಾತೀಯತೆಯನ್ನು ಅಲ್ಲಗಳೆದಂತೆಯೇ ವಿದೇಶೀಯರಲ್ಲಿಯ ವರ್ಣಬೇಧ ನೀತಿ, ಜನಾಂಗೀಯ ದ್ವೇಷ, ಗುಲಾಮಗಿರಿ ಇತ್ಯಾದಿಗಳನ್ನು ಖಂಡಿಸಿದರು. ಎಲ್ಲರೂ ದೈವಾಂಶಸಂಭೂತರೇ ಎಂಬ ಅವರ ಭಾವನೆ ವಿಶ್ವಮಾನವತಾವಾದದ ಸೈದ್ಧಾಂತಿಕ ತಳಹದಿ. ನಾನು ರೂಪರಹಿತನಾಗಿ, ದೇಶ-ಕಾಲಗಳ ಹೊರತಾಗಿ, ವಿಶ್ವದ ಮೂಲಸ್ವರೂಪವೇ ಆಗಿದ್ದೇನೆ ಎಂದು ಒಮ್ಮೆ ಅವರು ಭಾವಪರವಶರಾಗಿ ಹೇಳಿದ್ದರು *(Marie Louise Burke, **Swami Vivekananda in the West**, 1994)*. ಒಮ್ಮೆ ಆಲೆನ್ ಎಂಬ ಅಭಿಮಾನಿಯೊಬ್ಬರು ಅವರನ್ನು ಸಂದರ್ಶಿಸಿ ಬೀಳ್ಕೊಡುವಾಗ, ''ಸರಿ, ನಾವಿನ್ನು ಮುಂದೆ ಅಲಾಮಿಡಾದಲ್ಲಿ ಕಾಣುವಾ'' ಎಂದರು. ಆಗ ಸ್ವಾಮೀಜಿಯವರು, ''ಇಲ್ಲ ಅಲೆನ್, ಅಲಾಮಿಡಾದಲ್ಲಿ ನಾನಿಲ್ಲ; ನನ್ನಲ್ಲೇ ಅಲಾಮಿಡವಿದೆ'' ಎಂದು ನಗಾಡಿದರು. ೧೮೯೦ರಲ್ಲಿ ಒಮ್ಮೆ ಅವರು ಹೃಷಿಕೇಶದಲ್ಲಿ ತೀವ್ರ ಅಸ್ವಸ್ಥರಾದರು. ಅವರ ನಾಡಿಬಡಿತವೂ ಕ್ಷೀಣವಾಗಲು